ಎಂ.ಸಿ. ಧನ್ಯತಾ, ಬೆಂಗಳೂರು
ಅನಾದಿ ಕಾಲದಿಂದಲೂ ಹುಂಜ ಕೂಗುವುದು ವಾಸ್ತವವಾದರೂ ಕೋಳಿ ಕೂಗಿತು ಎನ್ನುವುದೇಕೆ?



ಕೊಕ್ಕೊಕೋಕೋ ಎಂಬುದನ್ನು 'ಕೋ ಅವಳಿ' ಕೂಗಿತು ಎಂದಿದ್ದು ಕ್ರಮೇಣ ಕೋಳಿ ಕೂಗಿತು ಎಂದಾಯ್ತಂತೆ.

ಅನಸೂಯ ಟಿ. ಕೇದಿಗೆಮನೆ
ನಿಮಗೆ ಯಾವ ಪಕ್ಷ ಅಧಿಕಾರಕ್ಕೆ ಬರಬೇಕು ಗುರುಗಳೇ?
ಹಣ ಹಂಚದೆ ಅಧಿಕಾರಕ್ಕೆ ಬರುವ ಪಕ್ಷ. ಅಂತಹದ್ದು ನಮ್ಮಲ್ಲಿಲ್ಲ.

ಹರಿತಸ, ಬೆಂಗಳೂರು
ಚಾಲಕರಹಿತ ರೈಲು ಸೇವೆಗೂ, ರಾಜಕಾರಣಿಗಳ ಭಾಷಣದ ರೈಲಿಗೂ ಏನು ವ್ಯತ್ಯಾಸ?
ಅಲ್ಲಿ ಹಳಿ ಪ್ರಧಾನ; ಇಲ್ಲಿ ಹಳಿಯುವಿಕೆ ಪ್ರಧಾನ.

ಲಕ್ಷ್ಮೀನಾರಾಯಣ, ಕೆಂಗೇರಿ
ದೇವರಿಗೆ ಪೂಜೆ, ಗುಡಿ ಬೇಡವಂತೆ. ಬಯಲಲ್ಲಿ ನಿಲ್ಲಿಸಿ ಎಲ್ಲರೂ ಪೂಜಿಸಬೇಕಂತೆ. ಇದನ್ನೆಂತು ನಿಭಾಯಿಸುವುದು?



ಬಹಳ ಸುಲಭ. ಫಲ ನೀಡುವ ಮರಗಳನ್ನು ನೆಟ್ಟು ಅವುಗಳಲ್ಲೇ ದೇವರನ್ನು ಕಾಣಿ.

ಸಿಹಿಮೊಗೆ ರಮೇಶ್, ಮೈಸೂರು
ಸದನದ ಘನತೆ, ಗೌರವಗಳನ್ನು ಕಲಿಸುವ ಎಲ್‌ಕೆಜಿ ತರಗತಿಯನ್ನು ಆರಂಭಿಸಲಿದ್ದೇನೆ. ಕೈಜೋಡಿಸುವಿರೇ?
ಕೈಯಷ್ಟೇ ಅಲ್ಲ, ಕಮಲ, ಪೊರಕೆ, ತೆನೆಗಳನ್ನೂ ಜೋಡಿಸುತ್ತೇನೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಜ್ಞಾನಕ್ಕೂ, ಅನುಭವಕ್ಕೂ ಇರುವ ವ್ಯತ್ಯಾಸ ತಿಳಿಸಿ?
ಹಿಂದಿನ ಅನುಭವವೇ ಇಂದಿನ ಜ್ಞಾನ.

ಬಾ.ರಂ ಸುರೇಶ್, ಶಿವಮೊಗ್ಗ
ನನ್ನ ತಲೆಯಲ್ಲಿ ಸ್ವಲ್ಪ ಕೂದಲಿದೆ. ದಾಡಿಯಿದೆ. ನಾನು ಹೋಗುತ್ತಿರುವಾಗ ಹೆಂಗಳೆಯರು ತಿರುತಿರುಗಿ ನೋಡುವುದೇಕೆ?
ಮನೆಗೆ ತೆಂಗಿನಕಾಯಿ ಒಯ್ಯಬೇಕೆಂದು ನೆನಪಾಗುತ್ತದಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಪ್ರಶ್ನೆ ಕೇಳುವುದಕ್ಕೆ ಮಿತಿ ಏನಾದರೂ ಇದೆಯೆ ಗುರುಗಳೇ?
ಇರಲೂಬಾರದು. ಪ್ರಶ್ನೆಯೇ ಜ್ಞಾನವೃದ್ಧಿಗೆ, ಆವಿಷ್ಕಾರಕ್ಕೆ ಮೂಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಈ ದೇಶದಲ್ಲಿ ಮೀಸಲಾತಿಯ ನಿಯಮವು ಇತ್ತೀಚೆಗೆ ಅತಿಯಾಗುತ್ತಿದೆಯಲ್ಲ?
ಹಿಂದುಳಿಯಲು ಜನರು ಮುಗಿಬೀಳುತ್ತಿರುವುದೇ ಕಾರಣ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಹಿಂದೆ ಮಹಿಳೆ ಅಬಲೆ. ಈಗ ಸಬಲೆ. ಮುಂದೆ?
ಎಲ್ಲ ಕ್ಷೇತ್ರಗಳಲ್ಲೂ ಭಲೆ ಭಲೆ!

ಎಸ್.ವಿ. ಶ್ರೀನಿವಾಸ್, ಮೈಸೂರು
ಈಟಿ ಎಸೆತದ ಸ್ಪರ್ಧೆಯಲ್ಲಿ ಈಟಿಯನ್ನು ಕೆಳಗೆ ಬೀಳಿಸಿ ನಾವೇ ಹಾರಿ ಬಿದ್ದರೆ ಏನಾಗುತ್ತದೆ?
ಸದ್ಯ! ಶೂಟಿಂಗ್ ಸ್ಪರ್ಧೆಯಲ್ಲಿ ಬಂದೂಕನ್ನು ಕೆಳಗೆಸೆದು ನಾವೇ ಢಂ ಎಂದರೆ ಹೇಗಿರುತ್ತೆಂದು ಕೇಳಲಿಲ್ಲವಲ್ಲ!

ಪಿ.ಎನ್. ಶ್ರೀವತ್ಸ, ಬೆಂಗಳೂರು
'ಆದದ್ದೆಲ್ಲಾ ಒಳಿತೇ ಆಯಿತು' ಎಂದು ಯಾವಾಗಲೂ ಹೇಳಲಿಕ್ಕೆ ಬರುವುದಿಲ್ಲ ಅಲ್ಲವೇ?
ರಾಜಕೀಯದಲ್ಲಂತೂ ಯಾವ ಪಕ್ಷ ಗೆದ್ದರೂ ಹೀಗೆ ಹೇಳಲು ಸಾಧ್ಯವಿಲ್ಲ.

ರಾಜಶೇಖರ ಹಾದಿಮನಿ, ಧಾರವಾಡ
ಆಕ್ಸ್‌ಫರ್ಡ್ ಶಾಲೆ, ಮಹಾವಿಶ್ವವಿದ್ಯಾಲಯಗಳು ಭಾರತದಲ್ಲೇಕೆ?
ಬ್ರಿಟಿಷರ ಕುರುಹು ಇರಬೇಕಲ್ಲ. ಬ್ರಿಟಿಷ್ ಗಾಯ ವಾಸಿಯಾದರೂ ಇಂಗ್ಲಿಷ್ ಕಲೆ ಉಳಿಯಿತು.

## ವಾರದ ಪ್ರಶ್ನೆ

ಮಂಡಿ ಕುಮಾರ್, ಬೆಂಗಳೂರು
ಹರಿದ ಜೀನ್ಸ್ ತೊಡುವ ಹಾಗೆ ಹರಿದ ಸೀರೆ ಉಡುವ ಫ್ಯಾಷನ್ ಇನ್ನೂ ಏಕೆ ಬಂದಿಲ್ಲ?
ಅದು ವೆರಿ ಓಲ್ಡ್ ಫ್ಯಾಷನ್. ದಮಯಂತಿ–ನಳರದು ಒನ್–ಬೈ–ಟು ಸೀರೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಬೆತ್ತಲೆ ಪ್ರಪಂಚದಲ್ಲಿ ಬಟ್ಟೆ ಧರಿಸಿದವನು ಮೂರ್ಖ. ಬುದ್ಧಿವಂತ ಯಾರು?
ಅವರಿಗೆಲ್ಲ ಸನ್‌ಸ್ಕ್ರೀನ್ ಲೋಷನ್ ಮಾರುವವನು.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
'ಪತಿದೇವರು' ಎನ್ನುತ್ತಾರೆ. ಆದರೆ 'ಪತ್ನಿದೇವತೆ' ಎಂದೇಕೆ ಹೇಳುವುದಿಲ್ಲ ಗುರು?
ಪ್ರತಿದಿನ ಮಂತ್ರಪುಷ್ಪ, ಮಂಗಳಾರತಿ, ಅಷ್ಟೋತ್ತರಗಳಿಗೆ ಈಡಾಗುವುದು ಅವನೇ ಆದ್ದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನು ನೋಡುವ ನೋಟ ಹೇಗಿರಬೇಕು ಸರ್?



ಮತ್ತೊಮ್ಮೆ ಹಾಗೆ ನೋಡಲಿ ಎನ್ನಿಸುವಂತೆ.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕಾ
ಇಂದಿನವರು 'ನಮ್ಮ ಬದುಕು ನಮಗೆ ಬದುಕಲು ಬಿಡಿ' ಎಂದರೆ ಉಳಿದವರ ಬದುಕು?
ಬದುಕಬೇಕು. ನಾಯಿಮರಿ ದೂರ ಹೋಯಿತೆಂದು ತಾತನಾಯಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ.

ಜೀವಿ, ಗೊಂಡೇದಹಳ್ಳಿ
ದುಡಿದು ಬಂದ ಎತ್ತನ್ನು ಮನೆಯಲ್ಲಿರುವ ಎತ್ತು ತಿವಿಯಲು ಶುರು ಮಾಡುವುದಲ್ಲ?
ಸಾಕುಪ್ರಾಣಿಗಳು ಮನೆಯವರ ಗುಣಗಳನ್ನು ಅನುಸರಿಸುವುದು ಸಹಜ.

■ ರಾಮ್